ಮಾಡಬೇಕಾಗುತ್ತದೆ. ಚರ್ಚೆ, ಗಲಾಟೆ, ಗುಜುಗುಜು, 'ಇನ್ನು ಕಡಿಮೆ ಸಾಧ್ಯವಿಲ್ಲ, ಇದೇ ಕಡೇ ಬೆಲೆ' ಎಂಬ ಪೂರ್ಣವಿರಾಮದ ಮಾತುಗಳು ಕಿವಿಗೆ ಬೀಳುತ್ತಲೇ ಇದ್ದವು. ಬೇಡಬೇಡ ಎಂದುಕೊಳ್ಳುತ್ತಲೇ ನಾವೂ ಒಂದಷ್ಟು ಪುಸ್ತಕಗಳನ್ನು ಕೊಂಡುಕೊಂಡೆವು,

ಕಾಲೇಜು ರಸ್ತೆಯು ತಿಂಡಿಪ್ರಿಯರ ಸ್ವರ್ಗವೂ ಹೌದೆಂಬುದು ಮುಂದೆ ಹೋಗುತ್ತ ಅನುಭವಕ್ಕೆ ಬಂತು. ಅಲ್ಲಲ್ಲಿ ಸಮೋಸ, ಕಚೋರಿ, ಚೋಮೆನ್, ಪುಚ್ಕಗಳನ್ನು ಮಾರುವ ಗಾಡಿಗಳು; ಪುತಿರಾಮ್ ಮತ್ತು ಮೌಚಕ್‌ನಂತಹ ಹೆಸರಾಂತ ರಸಗುಲ್ಲ, ಸಂದೇಶ, ಗುಲಾಬ್ ಜಾಮೂನುಗಳ ಅಂಗಡಿಗಳು; ಒಂದು ಕೈಯ್ಯಲ್ಲಿ ಪುಸ್ತಕಗಳ ಕಟ್ಟನ್ನು ಎದೆಗವಚಿ ಹಿಡಿದು, ಇನ್ನೊಂದು ಕೈಯಿಂದ ಜಾಮೂನನ್ನೋ, ಪುಚ್ಕವನ್ನೋ ಬಾಯಿಯೊಳಗೆ ತುರುಕುತ್ತಿದ್ದ ಮಂದಿ!

ಅಲ್ಲಿಂದ ಇಂಡಿಯನ್ ಕಾಫಿ ಹೌಸಿನತ್ತ ಹೆಜ್ಜೆ ಹಾಕಿದೆವು. ಕಾಲೇಜು ರಸ್ತೆಗೆ ಕಿರೀಟ ಪ್ರಾಯದಲ್ಲಿರುವ ಇಂಡಿಯನ್ ಕಾಫಿ ಹೌಸಿನ ವಿಚಾರವಿಲ್ಲದೆ ಆ ರಸ್ತೆಯ ಬಗೆಗಿನ ಬರಹ ಅಪೂರ್ಣ. ಇಂಡಿಯನ್ ಕಾಫಿ ಹೌಸ್ ಮತ್ತು ಕಾಲೇಜು ರಸ್ತೆ – ಇವೆರಡೂ ಕೊಲ್ಕತ್ತದ ಜೋಡಿ ಹೆಗ್ಗುರುತುಗಳು. ಅದೊಂದು 1876ರಷ್ಟು ಹಿಂದೆ ಕಟ್ಟಿದ ಆಲ್ಬರ್ಟ್ ಹಾಲ್ ಎಂಬ ವಿಶಿಷ್ಟವಾದ ಕಟ್ಟಡ. ಮುಂದೆ 1942ರಲ್ಲಿ ಕಾಫಿ ಬೋರ್ಡ್ ಅಸ್ತಿತ್ವಕ್ಕೆ ಬಂದಾಗ ಅಲ್ಲಿ ಕಾಫಿ ಹೌಸನ್ನು ಆರಂಭಿಸಿದ್ದರು. ಕಾಲೇಜು ರಸ್ತೆಯ ಸಾಮೀಪ್ಯದಿಂದಾಗಿ ಅದು ಕಲಾವಿದರ, ಬುದ್ಧಿಜೀವಿಗಳ, ರಾಜಕೀಯ ನಾಯಕರ 'ಅಡ್ಡಾ' ಆಗಿ ಬೆಳೆಯಿತು. ರಬೀಂದ್ರನಾಥ ಟಾಗೋರ್, ಸತ್ಯಜಿತ್ ರೇ, ಜಗದೀಶ ಚಂದ್ರ ಬೋಸ್, ಅಮರ್ತ್ಯ ಸೇನ್, ಅಪರ್ಣಾ ಸೇನ್, ರಿತ್ವಿಕ್ ಘಟಕ್, ಸುಭಾಷ್ ಚಂದ್ರ ಬೋಸ್, ಹೀಗೇ ಎಂತೆಂಥ ದಿಗ್ಗಜರೆಲ್ಲ ಕಾಫಿ ಕುಡಿದ ಸ್ಥಳ. ಬಂಗಾಲಿ ಲೇಖನಗಳಲ್ಲಿ, ಕಾದಂಬರಿಗಳಲ್ಲಿ ಆ ಬಗ್ಗೆ ಓದಿದ್ದ ನಮಗೆ ಒಳಗೆ ಹೋಗುವಾಗಲೇ ಏನೋ ಪುಳಕ.

ಒಳಗಿನ ವಿಶಾಲವಾದ ಹಜಾರ, ಮೇಲೆ ದೊಡ್ಡಕೋಣೆಯಂತಹ ಬಾಲ್ಕನಿ, ಎರಡೂ ಕಡೆಗೆ ಕಾಣುವಂತೆ ಬಾಗಿಲ ಮೇಲೆ ನೇತು ಹಾಕಿದ್ದ ಟಾಗೋರರ ಬೃಹತ್ ಭಾವಚಿತ್ರ, ಗ್ರಾಹಕರಿಗೆ ಕಾಫಿ ಒದಗಿಸುತ್ತಿದ್ದ, ಬಿಳಿ ಸಮವಸ್ತ್ರ, ಪೇಟಾ ಧರಿಸಿದ ವಯಸ್ಕ ಪರಿಚಾರಕರು. ಅಲ್ಲಲ್ಲಿ ಮಾತುಕತೆಗಳಲ್ಲಿ ಮುಳುಗಿ, ಕಾಫಿ ಕುಡಿಯುತ್ತ ಕುಳಿತಿದ್ದ ಸಣ್ಣಸಣ್ಣ ಗುಂಪುಗಳು. ತಾಜಾ ಕಾಫಿಯ ಸುವಾಸನೆಯೊಂದಿಗೆ, ಪುಸ್ತಕಗಳ ಪರಿಮಳ! ದಶಕಗಳಿಂದ ಕೊಲ್ಕತ್ತದ ಬುದ್ಧಿಜೀವಿಗಳು, ಕಲಾವಿದರು ಇಲ್ಲಿ ಸೇರುತ್ತಿದ್ದರು, ಹೊಸ ಆಲೋಚನೆಗಳು ಹುಟ್ಟುತ್ತಿದ್ದವು, ಸೃಜನಶೀಲ ಚರ್ಚೆಗಳು ಹೊತ್ತಿಕೊಳ್ಳುತ್ತಿದ್ದವು. ತೀರಾ ಸರಳವಾದ ಈ ಸ್ಥಳದಲ್ಲಿ ಅನೇಕ ಪ್ರಮುಖ ಚಾರಿತ್ರಿಕ ಸಭೆಗಳೂ ನಡೆದಿದ್ದವಂತೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಸ್ಥಾಪನೆಗಿಂತ ಮೊದಲು 1883ರಲ್ಲಿ ಅದರ ಮೊತ್ತಮೊದಲ ಸಭೆ ನಡೆದುದೂ ಇಲ್ಲಿಯೇ.

ಕಾಫಿಯೊಂದಿಗೆ ದಪ್ಪದ ಬೆಣ್ಣೆ ಬಿಸ್ಕೀಟುಗಳನ್ನು ತಿಂದು ಅಲ್ಲಿಂದ ಹೊರಡುತ್ತಿದ್ದಾಗ, ಬಾಗಿಲ ಬಳಿ ಕುಳಿತ ಕೆಲವು ಹುಡುಗ- ಹುಡುಗಿಯರು 'ಕಾಫಿ ಹೌಸ್...' ಎಂದು ಯಾವುದೋ ಹಾಡನ್ನು ಗುನುಗುನಿಸುತ್ತಿದ್ದರು. ವಿಚಾರಿಸಲಾಗಿ ಅದು ಹಿಂದೆ ಖ್ಯಾತ ಹಿನ್ನೆಲೆ ಗಾಯಕ ಮನ್ನಾಡೆ ಅದೇ ಕಾಫಿ ಹೌಸಿನ ಬಗ್ಗೆ ಹಾಡಿದ ಬಂಗಾಲಿ ಪದ್ಯವೆಂದು ತಿಳಿಯಿತು.

'ಕಾಫಿ ಹೌಸರ್ ಶೈ ಅಡ್ಡಾತ ಆಜ್ ಆರ್ ನೈ....'

ಸುಲಭದಲ್ಲಿ ಬಾಯಿಗೆ ಬರುವಂತಿದ್ದ ಲಯ ಬದ್ಧವಾದ ಆ ಹಾಡನ್ನು ಮಕ್ಕಳೊಂದಿಗೆ ನಾವೂ ಗುನುಗುನಿಸುತ್ತ ಹೊರಗೆ ಬಂದೆವು. ಕಾಫಿ ಹೌಸಿನ ಕಳೆದು ಹೋದ ದಿನಗಳಿಗಾಗಿ ಪರಿತಪಿಸುವ ಆ ಹಾಡು, ಹಾಡಿನ ಅರ್ಥ ಮನಸ್ಸಿನೊಳಗೆ ಇಳಿಯುತ್ತಿದ್ದಂತೆ, ಮನಸ್ಸು ಹಳಹಳಿಕೆಯಿಂದ ಭಾರವಾಯ್ತು.

ಕಾಫಿ ಹೌಸಿನ ಆ ಸ್ನೇಹಕೂಟಗಳು ಈಗೆಲ್ಲಿ
ಎಲ್ಲಿ ಮಾಯವಾದವು ಆ ಸುಂದರ ಸಂಜೆಗಳು...
ಆ ಏಳು ಮಂದಿ ಅಲ್ಲಿ ಇಲ್ಲ ಈಗ
ಮೇಜು ಮತ್ತು ಕಾಫಿ ತುಂಬಿದ ಏಳು ಕಪ್ಪುಗಳು
ಮಾತ್ರ ಇನ್ನೂ ಅಲ್ಲಿವೆ
ಕಾಫಿ ಹೌಸಿನಲ್ಲಿ ಹುಟ್ಟಿದ ಕನಸುಗಳೋ
ಕೆಲವು ನಿಜಕ್ಕೆ ತಿರುಗಿದರೆ,
ಇನ್ನೆಷ್ಟೋ ಮೋಡಗಳಾಚೆ ಮಾಸಿ ಹೋಗಿವೆ...

●